ಹೆಚ್ಚು ಹೊರುತ್ತಾನೆ. ವೃದ್ಧರ ಕಾಯಿಲೆಯಿಂದ ಬೇಸತ್ತ ಮಂದಿ 'ಹಾಂ ಇನ್ನು ಪರವಾಯಿಲ್ಲ. ಶಂಭು ಮನೆ ಹೊಕ್ಕ ಅಂದರೆ ಸಾವೇ ಹೊಕ್ಕಂತೆ. ಕಷ್ಟದ ದಿನಗಳು ಬೇಗನೇ ಮುಗಿಯುತ್ತವೆ' ಎಂದುಕೊಳ್ಳುತ್ತಿದ್ದುದೂ ಇತ್ತು. ಅಂತಹ ಮಾತು ತನ್ನದೇ ಕಿವಿಯ ಮೇಲೆ ಬಿದ್ದರೂ ಅದನ್ನು ಮನಸ್ಸಿಗೆ ತೆಗೆದು ಕೊಳ್ಳುವುದಿಲ್ಲ ಶಂಭು.

ಮತ್ತೆ ಮಾರನೆಯ ದಿನದಿಂದ ಸಾವಿನ ಮನೆಯಲ್ಲೇ ಇದ್ದರೂ ಸಾವಿನ ಸೂತಕವಿಲ್ಲದ ಶಂಭುವಿನ ಕೆಲಸ ಪುನಃ ಪ್ರಾರಂಭ. ಸಾವಿನ ಸೂತಕದವರು ದುಡಿಯುವ ಹಾಗಿಲ್ಲವಲ್ಲ! ಪುರೋಹಿತರಿಗೆ ಬೇಕಾದ ಕಟ್ಟಿಗೆಯನ್ನೋ ಅಪರೂಪದ ಪದಾರ್ಥಗಳನ್ನೋ ಬೇಡಿ ಕಾಡಿ ಎಲ್ಲೆಲ್ಲಿಂದಲೋ ತರುವುದೂ ಅವನೆ. ಹಸಿ ಸೌದೆಯನ್ನು ತುಂಡು ಮಾಡಿ ಕೊಡುವುದೂ ಅವನೇ. ನಡೆದ ಸಾವಿನ ಅರಿವಿಲ್ಲದ ಚಿಕ್ಕ ಮಕ್ಕಳು ಅತ್ತರೆ ಹೊತ್ತುಕೊಂಡು ಪಕ್ಕದ ಮನೆಗೆ ಹೋಗಿ ಅಲ್ಲಿ ಅಂಗಲಾಚಿ ಅವಕ್ಕೆ ಬೇಕಾದದ್ದನ್ನು ತಿನ್ನಿಸಿಕೊಂಡು ಬರುವುದೂ ಅವನೇ. ಸತ್ತ ವ್ಯಕ್ತಿಯ ಸದ್ಗತಿಗಾಗಿ ಮಾಡುವ ಯಾರೂ ಹಿಡಿಯಲು ಒಪ್ಪದ ಕೆಲವು ದಾನಗಳನ್ನು ಸ್ವೀಕರಿಸುವ ಮಂದಿಯನ್ನು ಹಿಡಿದುಕೊಂಡು ಬರುವವನೂ ಅವನೇ. ಸತ್ತವರ ಹೆಸರಿನಲ್ಲಿ ಗೋದಾನ ಭೂದಾನ ಸುವರ್ಣ ದಾನಗಳನ್ನು ಮಾಡುವ ಮೃತರ ಮಕ್ಕಳು ತಪ್ಪಿಯೂ ಇವನತ್ತ ನೋಡುವುದಿಲ್ಲ. ಅವೆಲ್ಲ ಹೋಗಲಿ. ಬರೀ ನೆಲದಮೇಲೆ ಮಲಗಿ ಜಡ್ಡುಗಟ್ಟಿದ್ದ ಬೆನ್ನಿಗೆ ಹಿತವಾದರೂ ಆದೀತು ಅಥವಾ ಬೇರೆಯವರಿಗಾಗಿಯೇ ತಿರುಗಿ ತಿರುಗಿ ಸವೆದ ಕಾಲುಗಳಿಗೆ ಸ್ವಲ್ಪ ಆಸರೆಯಾದರೂ ಆದೀತು ಎಂದು ಯಾರಿಗೂ ಬೇಕಿರದ ಚಾಪೆಯಯನ್ನೋ ಚಪ್ಪಲಿಯನ್ನೋ ದಾನ ಮಾಡುವಾಗಲಾದರೂ ಇವನ ನೆನಪು ಬರಬೇಕಿತ್ತು. ಊಂ... ಹೂಂ... ಅದೂ ಇಲ್ಲ! ಅದೆಲ್ಲ ಹೋಗಲಿ ಕೊನೆಯ ನಾಲ್ಕು ದಿನಗಳಲ್ಲಿ ಭೂರಿ ಭೋಜನವನ್ನು ಹಾಕಿಸಿ ಬಂದವರನ್ನು ತೃಪ್ತಿಪಡಿಸುವಾಗಲಾದರೂ ಈ ಎಲ್ಲ ಕೆಲಸಗಳನ್ನು ಹಿಂದೆ ನಿಂತು ಮಾಡಿಕೊಟ್ಟ ಶಂಭುವಿಗೂ ಒಂದು ತುತ್ತು ಹಾಕಬಹುದಿತ್ತು ಎಂದೂ ಯಾರಿಗೂ ಅನ್ನಿಸುವುದಿಲ್ಲ. ಅದೇ ಊಟ ಮಾಡಿದ ಎಲೆ ತೆಗೆಯುವ ಹೊತ್ತಿಗೆ ಯಾರೋ ಗಟ್ಟಿ ದನಿಯಲ್ಲಿ ಅರಚಬೇಕು 'ಎಲ್ಲಿ ಸತ್ತ ಈ ಶಂಭು. ಉಂಡ ಎಲೆತೆಗೆಯುವವರು ಯಾರು... ಎರಡನೇ ಪಂಕ್ತಿಗೆ ಎಲೆಹಾಕುವುದು ಬೇಡವೇ...' ಅದೆಲ್ಲಿರುತ್ತಾನೋ ಶಂಭು ಪ್ರತ್ಯಕ್ಷ... ಕುರಿಯ ಹಾಗೆ ತಲೆ ತಗ್ಗಿಸಿಕೊಂಡು ಎಂಜಲೆಲೆಗಳನ್ನು ತೆಗೆಯುತ್ತ ಹೋಗಬೇಕು. ಎರಡನೆಯದು ಬಿಡಿ. ಮೂರನೇ ಪಂಕ್ತಿಯಲ್ಲೂ ಅವನಿಗೊಂದು ಜಾಗವಿಲ್ಲ. ಕೆಲಸದವರಿಗಾಗಿಯೇ ಹಾಕುವ ಕೊನೇ ಪಂಕ್ತಿಯಲ್ಲೂ...

*****

ತಂಗಿಯ ಮದುವೆ ನಿಶ್ಚಯವಾಗಿದೆಯೆಂಬ ಸುದ್ದಿ ತಿಳಿಯುತ್ತಲೇ ಅವನು ಇದ್ದ ಬದ್ದ ಹಣವನ್ನೆಲ್ಲ ಒಟ್ಟು ಮಾಡಿ ಕಳುಹಿಸಿದ್ದ. ತಣ್ಣಗೆ ಹಣ ತೆಗೆದುಕೊಂಡ ಆ ಅಣ್ಣಂದಿರು ಸಾವಿರ ಮೈಲಿ ದೂರದಲ್ಲಿದ್ದ ಇವನಿಗೆ ಮದುವೆಯ ತಾರೀಕನ್ನೇ ತಿಳಿಸಿರಲಿಲ್ಲ. ಅಲ್ಲಿ ಇಲ್ಲಿ ಕೇಳಿ ಮಾಡಿ ಊರಿಗೆ ಹೊರಟಿದ್ದ 'ಬೇಡ ನಾನು ಬರುವುದಿಲ್ಲ' ಎಂದು ಗೊಣಗರೆಯುತ್ತಿದ್ದ ಹೆಂಡತಿಯನ್ನೂ ಹೊರಡಿಸಿಕೊಂಡು. ಮದುವೆಯ ಮನೆಯೆಂದ ಮೇಲೆ ಬರಿಗೈಯ್ಯಲ್ಲಿ ಹೋಗಲಿಕ್ಕುಂಟೇ. ಅಣ್ಣಂದಿರಿಗೆ, ಅವರ ಹೆಂಡಂದಿರಿಗೆ ಅಕ್ಕ ತಂಗಿಯಂದಿರಿಗೆ, ಹತ್ತಿರದ ಸಂಬಂಧಿಕರಿಗೆ, ದೂರದವರಿಗೆ ಎಂದು ಸೀರೆ, ಬಟ್ಟೆಗಳ ಗಂಟುಗಳನ್ನೇ ಕಟ್ಟಿಕೊಂಡು ಹೊರಟಿದ್ದರು. ಮನೆ ತಲುಪುವಾಗ ಸಂಜೆಗತ್ತಲು. ನೆಂಟರಿಷ್ಟರಿಂದ ತುಂಬಿದ ಮನೆ ಗಿಜಿಗುಟ್ಟುತ್ತಿತ್ತು. ಮನೆಯಂಗಳಕ್ಕೆ ಕಾಲಿಟ್ಟಾಕ್ಷಣ ಯಾರೋ ಗೊಣಗುತ್ತಿರುವುದು ಕೇಳಿಸಿತ್ತು 'ಇಷ್ಟೊತ್ತಿಗಾ ಮದುವೆ ಮನೆಗೆ ಬರುವುದು...'